## ಸ್ಮೃತಿಸಂಚಯ

# ನಿಖಿಲಾನಂದರು ಹೇಳಿದ ಅಮೂಲ್ಯ ನೆನಪುಗಳು

ಪ್ರವ್ರಾಜಿಕಾ ಶಾಶ್ವತಪ್ರಾಣಾ

**ಶ್ರೀ**ಮಾತೆ ಶ್ರೀಶಾರದಾದೇವಿಯವರ ಕೃಪೆಗೆ ಪಾತ್ರರಾದವರಲ್ಲಿ ಚಂದ್ರನೂ ಒಬ್ಬ. ಅವನು ಪ್ರತಿನಿತ್ಯವೂ ಶ್ರೀಮಾತೆಯವರಿಂದ ಪ್ರಸಾದವನ್ನು ಕೇಳಿ ಪಡೆಯುತ್ತಿದ್ದನು. ಶ್ರೀಮಾತೆಯವರು ಭಕ್ತಿಮುಕ್ತಿಗಳನ್ನು ಮತ್ತು ಯಾವುದೇ ವರಗಳನ್ನು ಅನುಗ್ರಹಿಸಲು ಶಕ್ತರೆಂದು ತಿಳಿದಿದ್ದರೂ ಅವುಗಳನ್ನು ಅಪೇಕ್ಷಿಸುತ್ತಿರಲಿಲ್ಲ.

ಶ್ರೀಶಾರದಾದೇವಿಯವರ ಮಹಾಸಮಾಧಿಯ ನಂತರ ಅವರ ಪುಣ್ಯ ಜನ್ಮತಿಥಿಯನ್ನು ಅದ್ದೂರಿಯಿಂದ ಆಚರಿಸಲಾಗುತಿತ್ತು. ಅಂತಹ ಒಂದು ಸಂದರ್ಭದಲ್ಲಿ ಚಂದ್ರನು ಅದರಲ್ಲಿ ಭಾಗವಹಿಸಿದ್ದನು. ವಿಶೇಷ ಪೂಜೆಯ ನಂತರ ಪ್ರಸಾದ ವಿತರಣೆಯ ಸಮಯದಲ್ಲಿ 'ಗೋಜ'- (ಬಾದೂಷಾವನ್ನು ಹೋಲುವ ತಿಂಡಿ) ಎನ್ನುವ ವಿಶೇಷ ರುಚಿಕರವಾದ ಸಿಹಿ ತಿಂಡಿಯನ್ನು ಒಬ್ಬ ಬ್ರಹ್ಮಚಾರಿ ಬಡಿಸುತ್ತಿದ್ದರು. ಎಲ್ಲರಿಗೂ ಹಂಚುವ ತರಹವೇ ಚಂದ್ರನ ಎಲೆಯಲ್ಲೂ ಒಂದು ತುಂಡನ್ನು ಬಡಿಸಿ ಮುಂದುವರಿದರು. ಆಗ ಚಂದ್ರ, "ಏಯ್, ನನಗೆ ಇನ್ನೊಂದನ್ನು ಕೊಡು" ಎಂದು ಕೂಗಿ ಹೇಳಿದನು. ಅದಕ್ಕೆ ಬ್ರಹ್ಮಚಾರಿ ಉತ್ತರಿಸಿದರು, "ನಿನಗೆ ಎರಡನ್ನು ಕೊಡಲು ಸಾಧ್ಯವಿಲ್ಲ, ಎಲ್ಲರಿಗೂ ಒಂದನ್ನೇ ಕೊಡುವುದು" ಎಂದು.

"ಏನು? ಏನು? ಏನು ನೀನು ಹೇಳುವುದು? ನಾನು... ನಾನು... ಅಮ್ಮ ಇದ್ದಾಗ ಈ ಗೋಜಾಗಳನ್ನು ಅವರು ತಮ್ಮ ಕೈಯಿಂದಲೇ ನನಗೆ ಧಾರಾಳವಾಗಿ ತಿನ್ನಿಸುತ್ತಿದ್ದರು" ಎಂದು ಅಬ್ಬರಿಸಿದ ಚಂದ್ರ. "ದಯವಿಟ್ಟು ಕ್ಷಮಿಸಿ. ನನಗೆ ಹಿರಿಯರು ಒಂದೇ ತುಂಡನ್ನು ಬಡಿಸಲು ಹೇಳಿದ್ದಾರೆ" ಎಂದು ಬ್ರಹಚಾರಿ ಉದಾಸೀನವಾಗಿ ಉತ್ತರಿಸಿದರು. "ಓಹೋ ನೆನ್ನೆ ಮೊನ್ನೆ ನೀನು ಬ್ರಹ್ಮಚಾರಿಯಾಗಿರುವೆ. ಎಂತಹ ಸೊಕ್ಕು ನಿನಗೆ? ನಾನಾದರೋ ಬಹಳ ಹಳೆಯ ಭಕ್ತ. ಅದೂ ಅಲ್ಲದೆ ಶ್ರೀಮಾತೆಯವರ ಪ್ರೀತಿ ವಾತ್ಸಲ್ಯಗಳಿಗೆ ಪಾತ್ರನಾದವನು. ಅಂತಹ ನನಗೆ ಇನ್ನೊಂದು ಸಿಹಿತಿಂಡಿ ಕೊಡಲು ಸಾಧ್ಯವಿಲ್ಲ ಎನ್ನುತ್ತೀಯಾ?" ಎಂದು ಚಂದ್ರನು ವಿಷಾದಪಟ್ಟನು. ಆ ದಿನವೆಲ್ಲಾ ಈ ಆಘಾತದಿಂದ ಚೇತರಿಸಿಕೊಳ್ಳಲು ಅವನಿಗೆ ಆಗಲೇ ಇಲ್ಲ.

ಅಂದು ರಾತ್ರಿ ಅವನಿಗೆ ಮಲಗಲು ಉಗ್ರಾಣದಲ್ಲಿಯೇ ಜಾಗ ಕೊಟ್ಟಿದ್ದರು. ಅಲ್ಲಿ ಮಲಗಿದಾಗ, ಹಗಲು ನಡೆದ ಕಹಿ ಅನುಭವವನ್ನೇ ಅವನ ಮನಸ್ಸು ಮೆಲುಕು ಹಾಕುತಿತ್ತು. "ಆಹ್ ಎಂತಹ ನಿಷ್ಠುರನಾಗಿಬಿಟ್ಟ ಆ ಬ್ರಹ್ಮಚಾರಿ! ನನಗೆ ಒಂದೇ ಒಂದು ತುಂಡು 'ಗೋಜಾ' ಸಿಕ್ಕಿತು. ಅದೂ ಅಲ್ಲದೆ. ಇವತ್ತು ಶ್ರೀಮಾತೆಯವರ ಜನ್ಮದಿನ. ಬೇರೆ ದಿನವಾಗಿದ್ದರೆ ಪರವಾಗಿರಲಿಲ್ಲ." ಹೀಗೆ ಯೋಚಿಸುತ್ತ ನಿದ್ರೆಬಾರದೆ ಚಂಚಲನಾಗಿ ಅತ್ತ ಇತ್ತ ಒದ್ದಾಡುತ್ತಿದ್ದಾಗ, ಅವನ ಕಾಲು ಒಂದು ಪಾತ್ರೆಗೆ ತಗಲಿತು.

"ಅರೆ, ಏನಿದು?" ಎಂದು ಎದ್ದು ತೆಗೆದು ನೋಡಿದಾಗ, ಏನಾಶ್ಚರ್ಯ! ಅದರ ಭರ್ತಿ 'ಗೋಜಾ' ಗಳನ್ನು ತುಂಬಿಸಿಟ್ಟಿದ್ದರು. ಎಲ್ಲರಿಗೂ ಹಂಚಿ ಮಿಕ್ಕ ಗೋಜಾಗಳು ಅವು. ಚಂದ್ರನು ಆನಂದದಿಂದ "ಹೋ! ಹೋ!! ಅವಿವೇಕಿಗಳೆ, ನೀವು ಈಗ ತಿಳಿದಿರೇನು? ನನ್ನ ಅಮ್ಮನಿಗೆ ಮೋಸ ಮಾಡಲು ಸಾಧ್ಯವೇ ಇಲ್ಲ ಎಂದು ಈಗ ನಿಮಗೆ ಗೊತ್ತಾಯಿತೆ?" ಎಂದು ಹೇಳಿಕೊಳ್ಳುತ್ತ, ಎಷ್ಟು ತಿನ್ನಲು ಸಾಧ್ಯವೋ ಅಷ್ಟನ್ನೂ ತಿಂದು. ಬೇಕಾದಷ್ಟು 'ಗೋಜಾ' ಗಳನ್ನು ಕಿಸೆಗಳಲ್ಲೂ ತುಂಬಿಸಿಕೊಂಡು ಬೆಳಕು ಹರಿಯುವ ಮುಂಚೆಯೇ ಅಲ್ಲಿಂದ ಚಂದ್ರ ಪರಾರಿಯಾದನು.

**"ಕರುಣಾಮಯಿಯಾದ ಶ್ರೀಮಾತೆಯವರು ಎಲ್ಲರ ಸಣ್ಣ ಪುಟ್ಟ ಮನೋಬಯಕೆಗಳನ್ನೂ ಪೂರ್ಣಗೊಳಿಸುವರು ಎಂದು ಇದರಿಂದ ಗೊತ್ತಾಗುತ್ತದೆ"** ಎಂದು ಈ ಪ್ರಸಂಗದ ಬಗ್ಗೆ ಸ್ವಾಮಿ ನಿಖಿಲಾನಂದರು ಹೇಳುತ್ತಾರೆ.

****

**ಸ್ವಾಮಿ** ಅಖಂಡಾನಂದರು ಪತ್ರಿಕೆಯಲ್ಲಿ ಪ್ರಕಟಿಸುವುದಕ್ಕಾಗಿ ಒಮ್ಮೆ ಲೇಖನವೊಂದನ್ನು ಬರೆದರು. ಅದರ ಗುಣಮಟ್ಟದಿಂದ ತೃಪ್ತರಾಗದ ಸ್ವಾಮಿ ವಿವೇಕಾನಂದರಿಗೆ ಬಹಳ ಕೋಪ ಬಂತು. ಸ್ವಾಮೀಜಿಯವರು ತಿರಸ್ಕಾರದಿಂದ ಬೈದುದಲ್ಲದೆ, ಶಿಕ್ಷೆಯಾಗಿ ಸ್ಕೂಲಿನ ಹುಡುಗರಿಗೆ ಶಿಕ್ಷೆ ಕೊಡುವಂತೆ, ಅಖಂಡಾನಂದರನ್ನು, ಒಂದು ಮೂಲೆಯಲ್ಲಿ ಮುಖವನ್ನು ಗೋಡೆಗೆ ತಿರುಗಿಸಿ ನಿಲ್ಲುವಂತೆ ಮಾಡಿದರು. ಅಷ್ಟೂ ಅಲ್ಲದೆ, "ನಿನ್ನ ತಲೆಯಲ್ಲಿ ಉತ್ತಮವಾದ ವಿಚಾರ ಬರುವವರೆಗೂ ನೀನು ಇಲ್ಲಿ ಕುಳಿತು ಧ್ಯಾನ ಮಾಡು" ಎಂದು ಆಜ್ಞಾಪಿಸಿದರು. ಅನಂತರ ಅದೇ ಕೋಣೆಯಲ್ಲಿ ನೆರೆದಿದ್ದ ಭಕ್ತರೊಡನೆ ಲೋಕಾಭಿರಾಮವಾಗಿ ಸಂಭಾಷಣೆಯಲ್ಲಿ ತೊಡಗಿದರು. ವಿಷಯ, ಮೀನು ಹಿಡಿಯುವ ವಿಧಾನದ ಬಗ್ಗೆ ಆಗಿದ್ದಿತು. ಸ್ವಾಮೀಜಿಯವರು ಸಂಭಾಷಣೆಯಲ್ಲಿ ತನ್ಮಯರಾಗಿ ಮತನಾಡುತ್ತಿದ್ದರು.

ಸ್ವಾಮಿ ಅಖಂಡಾನಂದರು ಪೂರ್ವಾಶ್ರಮದಲ್ಲಿ ಮೀನು ಹಿಡಿಯುವ ಹವ್ಯಾಸದಲ್ಲಿ ಬಹಳ ಉತ್ಸುಕರಾಗಿದ್ದವರು. ಸ್ವಾಮೀಜಿಯವರು ಅಲ್ಲಿದ್ದ ಒಬ್ಬರನ್ನು ಕುರಿತು ಪೂರ್ವ ಬಂಗಾಳದಲ್ಲಿ ದೊರೆಯುವ ಒಂದು ಜಾತಿಯ ಮೀನಿನ ಹೆಸರನ್ನು ಹೇಳಿ "ಅದರ ಗಾತ್ರ ಎಷ್ಟಿದೆ ನಿಮಗೆ ತಿಳಿದಿದೆಯೇನು?" ಎಂದು ಕೇಳಿದರು. ಆ ಭಕ್ತರಿಗೆ ಅದರ ಬಗ್ಗೆ ತಿಳಿದಿರಲಿಲ್ಲ. ಅದೇ ಪ್ರಶ್ನೆಯನ್ನು ಅಲ್ಲಿ ನೆರೆದಿದ್ದ ಒಬ್ಬೊಬ್ಬರಿಗೂ ಕೇಳಿದರು, ಆದರೆ ಅವರಿಗಾರಿಗೂ ಅದರ ಅರಿವಿರಲಿಲ್ಲ. ಇದ್ದಕ್ಕಿದ್ದಂತೆ ಮೂಲೆಯಿಂದ ಎರಡು ಕೈಗಳು ಉತ್ತರೀಯದ ಒಳಗಿನಿಂದ ಹೊರಕ್ಕೆ ಮೇಲೇರಿ ಬಂದು "ಇಷ್ಟು" ಎನ್ನುವ ಅಳತೆಯನ್ನು ತೋರಿದವು. ಸ್ವಾಮೀಜಿಯವರು ಸ್ವಾಮಿ

---

*ಪೂಜ್ಯ ಮಾತಾಜಿಯವರು ಕೇರಳದ ತ್ರಿಸ್ಸೂರಿನಲ್ಲಿರುವ ಶಾರದಾ ಮಠದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.*

ಅಖಂಡಾನಂದರಿಗೆ. "ಏಯ್ ಕಳ್ಳ, ಇದೇ ಏನು ನಿನ್ನ ಧ್ಯಾನ?" ಎಂದು ಜೋರಾಗಿ ನಕ್ಕರು.

****

**ಸ್ವಾಮಿ** ಬ್ರಹ್ಮಾನಂದರು ಮತ್ತು ಶ್ರೀರಾಮಕೃಷ್ಣರ ಆರಾಧಕರೂ ಹಾಗೂ ಬ್ರಹ್ಮಸಮಾಜದ ಮುಖಂಡರೂ ಆಗಿದ್ದ ಶ್ರೀವಿಜಯಕೃಷ್ಣ ಗೋಸ್ವಾಮಿಯವರು ಬಹಳ ಆಪ್ತರಾಗಿದ್ದರು. ಒಮ್ಮೆ ಇಬ್ಬರೂ ತೀರ್ಥಯಾತ್ರೆಗೆ ಹೋಗಿದ್ದರು. ಗೋಸ್ವಾಮಿಯವರೊಂದಿಗೆ ಅನೇಕ ಭಕ್ತರೂ, ಶಿಷ್ಯರೂ ಇದ್ದರು. ರಾತ್ರಿಯಾದಾಗ ಎಲ್ಲರೂ ಡೇರೆಗಳನ್ನು ಹೂಡಿ ವಿಶ್ರಾಂತಿಗಾಗಿ ತಂಗಿದರು. ಮರುದಿನ ಬೆಳಗ್ಗೆ ಸ್ವಾಮಿ ಬ್ರಹ್ಮಾನಂದರನ್ನು ಕಂಡಾಗ ಗೋಸ್ವಾಮಿಗಳು, "ನೋಡು, ನೀನು ಶಿಷ್ಯರನ್ನು ಮಾತ್ರ ಮಾಡಿಕೊಳ್ಳಬೇಡ" ಎಂದು ನುಡಿದರು. ಬ್ರಹ್ಮಾನಂದರು ಅಚ್ಚರಿಯಿಂದ, "ಏಕೆ ಹೀಗೆ ಹೇಳುವಿರಿ? ಕಾರಣವೇನು?" ಎಂದು ಕೇಳಿದರು. "ನೋಡು, ನೆನ್ನೆ ಮಧ್ಯರಾತ್ರಿಯಲ್ಲಿ ನನ್ನ ಎದೆಯನ್ನು ಯಾರೋ ಒತ್ತಿದಂತಾಯಿತು. ಎಚ್ಚರಗೊಂಡು ನೋಡಿದಾಗ ಒಬ್ಬ ಘಟಿಂಗ ಶಿಷ್ಯ ನನ್ನ ಎದೆಯ ಮೇಲೆ ಕುಳಿತು 'ಕೊಡಿ, ಕೊಡಿ' ಎಂದು ಕೂಗುತ್ತಿದ್ದ. ನಾನು 'ನಿನಗೆ ಏನು ಬೇಕು?' ಎಂದು ಕೇಳಿದಾಗ 'ನನಗೆ ಸಾಕ್ಷಾತ್ಕಾರ ಬೇಕು, ಈಗಲೇ ಬೇಕು, ಕೊಡಿ' ಎಂದು ಅಬ್ಬರಿಸುತ್ತಿದ್ದ!!' "

****

**ಸ್ವಾಮಿ** ನಿಖಿಲಾನಂದರು ಶ್ರೀ ರಾಮಕೃಷ್ಣರ ಪ್ರತ್ಯಕ್ಷ ಶಿಷ್ಯರಾದ ಸ್ವಾಮಿ ತುರೀಯಾನಂದರಿಂದ ಕೇಳಿದ ಒಂದು ಘಟನೆಯನ್ನು ಹೇಳಿದರು:

ಸ್ವಾಮಿ ತುರೀಯಾನಂದರು (ಆಗ ಹರಿನಾಥರು) ಒಂದು ದಿನ ಮಧ್ಯಾಹ್ನದ ಸಮಯದಲ್ಲಿ ಶ್ರೀರಾಮಕೃಷ್ಣರ ಸಂಗಡ ದಕ್ಷಿಣೇಶ್ವರದಲ್ಲಿ ಕೋಣೆಯಲ್ಲಿ ಕುಳಿತಿದ್ದರು. ಆಗ ಬಾಗಿಲಿನ ಬಳಿ ಯುವಕನೊಬ್ಬನು ಬಂದು ನಿಂತು, "ಮಹಾಶಯರೇ ನಿಮ್ಮ ಬಳಿ ಒಂದು ಚಾಕು ಇದೆಯೆ?" ಎಂದು ಕೇಳಿದ. ಆದರೆ ಶ್ರೀರಾಮಕೃಷ್ಣರು ಯಾವ ಉತ್ತರವನ್ನು ಕೊಡದೆ ಮೌನದಿಂದ ಇದ್ದರು. ಅವನು ಮತ್ತೆ, "ಕೇಳಿಸಲಿಲ್ಲವೆ? ನಿಮ್ಮ ಬಳಿ ಚಾಕು ಇದ್ದರೆ ಕೊಡಿ. ನಾನು ಮತ್ತು ನನ್ನ ಸ್ನೇಹಿತರು ದೇವಾಲಯದ ಉದ್ಯಾನವನದಲ್ಲಿ ವಿನೋದ ವಿಹಾರಕ್ಕಾಗಿ ಬಂದಿದ್ದೇವೆ. ನಮಗೆ ಚೂರಿಯ ಅವಶ್ಯಕತೆ ಇದೆ" ಎಂದನು. ಗುರುಮಹಾರಾಜರು ಅವನ ಕಡೆ ಸೂಕ್ಷ್ಮವಾಗಿ ನೋಡಿ, "ನೀನು ಹಿಂತಿರುಗಿ ತರುವೆಯಾ?" ಎಂದು ಸಂದೇಹದಿಂದ ಕೇಳಿದರು. ಆ ಹುಡುಗ, "ಹೌದು, ಹಿಂತಿರುಗಿ ತರುತ್ತೇನೆ" ಎಂದನು. ಅದೇ ಪ್ರಶ್ನೆಯನ್ನು ಮತ್ತೆ ಕೇಳಿದಾಗ, ಆ ಹುಡುಗ "ಹೌದು, ಖಂಡಿತ ತಂದುಕೊಡುವೆ" ಎಂದು ಖಚಿತವಾಗಿ ನುಡಿದ. ಆಗ ಶ್ರೀರಾಮಕೃಷ್ಣರು "ನೋಡು, ಆ ಮಂಚದ ಕಾಲಿನ ಕೆಳಗೆ ಒಂದು ಹಲಗೆಯ ಮೇಲೆ ಚೂರಿಯನ್ನು ಇಟ್ಟಿದ್ದೇನೆ, ತೆಗೆದುಕೋ. ಆದರೆ ಮರೆಯದೆ ತಂದು ಕೊಡಬೇಕು" ಎಂದು ಹೇಳಿ ಕಳುಹಿಸಿದರು. ಅವನು ಕೋಣೆಯಿಂದ ಸ್ವಲ್ಪ ದೂರ ಹೋದ ಮೇಲೆ ಗುರುಮಹಾರಾಜರು ಅವಸರದಿಂದ ಬಾಗಿಲ ಬಳಿ ಹೋಗಿ ಜೋರಾಗಿ ಕೂಗಿ ಹೇಳಿದರು. "ಏಯ್ ನೋಡು, ಚಾಕುವನ್ನು ಹಿಂದಕ್ಕೆ ತರಲು ಮರೆಯಬೇಡ." ಯುವಕನು ಅಸಹನೆಯಿಂದ "ಓಹ್, ನಿಮ್ಮ ಈ ಮುರುಕಲು ಚೂರಿಯನ್ನು ವಾಪಸ್ಸು ಕೊಡುತ್ತೇನೆ, ಹೆದರಬೇಡಿ" ಎಂದು ತಾತ್ಸಾರದಿಂದ ಕೂಗಿ ಹೇಳಿ ಮರಗಳ ಹಿಂದೆ ಮರೆಯಾದನು.

ಒಂದೆರಡು ಗಂಟೆಗಳಾಯಿತು. ಈ ಅವಧಿಯಲ್ಲಿ, ಮತ್ತೆ ಮತ್ತೆ ಶ್ರೀರಾಮಕೃಷ್ಣರು, "ಅವನು ಅದನ್ನು ಹಿಂತಿರುಗಿಸಿ ತರುವನೇನು?" ಎಂಬ ಪ್ರಶ್ನೆಯನ್ನೇ ಮತ್ತೆ ಮತ್ತೆ ಕೇಳುತ್ತಿದ್ದರು. ಇದನ್ನು ನೋಡುತ್ತ ಕುಳಿತಿದ್ದ ಹರಿಮಹಾರಾಜರು (ಸ್ವಾಮಿ ತುರೀಯಾನಂದರು) ಮನಸ್ಸಿನಲ್ಲಿ "ಸಂಶಯವೇ ಇಲ್ಲ, ಇವರು ಒಬ್ಬ ಬ್ರಾಹ್ಮಣನ ಮಗನೇ ಸರಿ. ಅದಕ್ಕಾಗಿಯೇ ಒಂದು ಚಿಕ್ಕ ಮೊಂಡು ಚಾಕುವಿನ ಮೇಲೆ ಇಷ್ಟೊಂದು ಮಮತೆ ಅವರಿಗೆ! ಅದಕ್ಕಾಗಿ ಹೇಗೆ ಪರದಾಡುತ್ತಿದ್ದಾರೆ ನೋಡು!" ಎಂದು ಅಂದುಕೊಂಡರು. ಆದರೆ ಅದನ್ನು ಹೊರಕ್ಕೆ ಪ್ರಕಟಸದೆ ಸುಮ್ಮನಿದ್ದರು. ಹೀಗೆಯೇ ಸಾಯಂಕಾಲ ೪ ಗಂಟೆಯವರೆಗೆ ನಡೆಯಿತು. ಆ ಹುಡುಗ ಹಿಂತಿರುಗಿ ಬರಲೇ ಇಲ್ಲ; ಚಾಕುವನ್ನು ತಂದುಕೊಡಲೇ ಇಲ್ಲ.

ಶ್ರೀರಾಮಕೃಷ್ಣರು "ಅವನಿನ್ನು ಚೂರಿಯನ್ನು ಹಿಂದಕ್ಕೆ ತರುವುದಿಲ್ಲವೆಂದು ತೋರುತ್ತದೆ" ಎಂದು ಆತಂಕಪಟ್ಟರು. ಆಗ ತುರೀಯಾನಂದರು ಬೇರೊಂದನ್ನು ತೆಗೆದುಕೊಂಡರೆ ಆಯಿತು ಎಂದು ಸಮಾಧಾನ ಪಡಿಸಲು ಯತ್ನಿಸಿದರು. ಅದಕ್ಕೆ ಗುರುಮಹಾರಾಜರು "ಆಗದು. ನೀನು ಹೋಗಿ ಉದ್ಯಾನವನದಲ್ಲಿ ಈಗಲೇ ಅವನನ್ನು ಹುಡುಕಿ ಚೂರಿಯನ್ನು ತೆಗೆದುಕೊಂಡು ಬಾ" ಎಂದರು. ಹರಿ ಮಹಾರಾಜರಿಗೆ, ಇಷ್ಟು ವಿಶಾಲವಾದ ಉದ್ಯಾನವನದಲ್ಲಿ ಎಲ್ಲಿ ಅಂತ ಅವನನ್ನು ಹುಡುಕುವುದು ಎಂದು ಅನ್ನಿಸಿದರೂ ಗುರುಗಳ ಮಾತನ್ನು ಮೀರಬಾರದು ಎಂದು ವಿಧೇಯರಾಗಿ ಹೊರಟರು. ಶ್ರೀರಾಮಕೃಷ್ಣರು ಮತ್ತೆ ಹರಿಮಹಾರಾಜರನ್ನು ಹಿಂದಕ್ಕೆ ಕರೆದು "ನೋಡು, ಉದ್ಯಾನವನದಲ್ಲಿ ಒಂದು ಬೃಹತ್ತಾದ ವೃಕ್ಷವಿರುವುದು. ಅದರ ಬುಡದಲ್ಲಿ ಆಲೂಗೆಡ್ಡೆಯ ಸಿಪ್ಪೆಯ ಗುಡ್ಡೆಯಿಂದ ನಿನಗೆ ಚಾಕು ಸಿಕ್ಕುವುದು" ಎಂದು ನಿಶ್ಚಯವಾಗಿ ನುಡಿದರು. ಆಶ್ಚರ್ಯ! ನಿಜವಾಗಿಯೂ ಅವರು ಹೇಳಿದ ಜಾಗದಲ್ಲಿ ಚೂರಿ ಸಿಕ್ಕಿತು. ಹರಿ ಮಹಾರಾಜರು ಚೂರಿಯನ್ನು ತಂದು ಶ್ರೀರಾಮಕೃಷ್ಣರಿಗೆ ಒಪ್ಪಿಸಿದರು.

ಶ್ರೀರಾಮಕೃಷ್ಣರು ಅದನ್ನು ಯಥಾಸ್ಥಳದಲ್ಲಿ ಇರಿಸಲು ಆದೇಶವಿತ್ತರು. ಇಡಲು ಅನುವಾದಾಗ, "ಶುಚಿಮಾಡದೆ ಹಾಗೇ ಇಡುತ್ತಿದ್ದೀಯೆ. ಅದನ್ನು ತೊಳೆದು ಒರೆಸಿ ಇಡಬೇಕು. ಆಗ, ಚೂರಿ ಕಿಲುಬಾಗುವುದಿಲ್ಲ. ಚೂರಿಯನ್ನು ಮಡಚಿ, ನಾನು ಮಲಗುವ ಮಂಚದ ಬಲಗಡೆಯ ಕಟ್ಟೆಯ ಮೇಲಿಡು. ನಾನು ಬೆಳಗಿನ ಜಾವ ಹಲ್ಲು ಶುಚಿಮಾಡುವ ಕಡ್ಡಿಯನ್ನು ತುಂಡುಮಾಡಲು ಇದನ್ನು ಉಪಯೋಗಿಸುವೆನು. ಅದರ ಮೊನೆ ತೆಗೆಯದಿದ್ದಲ್ಲಿ ಕೈಗೆ ಗಾಯವಾಗುವುದು ಹಾಗೂ ಅದು ಕೊಳಕಾಗಿದ್ದರೆ ಅಥವಾ ಇಟ್ಟ ಸ್ಥಳದಲ್ಲಿ ಸಿಕ್ಕದಿದ್ದಲ್ಲಿ ನನಗೆ ಆತಂಕವಾಗುತ್ತದೆ. ಇದರಿಂದಾಗಿ ನನಗೆ ಆ ದಿನದ ಧ್ಯಾನಕ್ಕೆ ಭಂಗವಾಗಿ, ಆ ದಿನವೆಲ್ಲಾ ಹಾಳಾದಂತೆಯೇ.

ಅದಕ್ಕಾಗಿಯೇ ನಾನು ನಿನಗೆ ಇಷ್ಟೆಲ್ಲಾ ಸಲಹೆಗಳನ್ನು ಕೊಟ್ಟು ಚೂರಿಯನ್ನು ಹುಡುಕಲು ಕಳಿಸಿದುದು ಮತ್ತು ಇಷ್ಟೆಲ್ಲ ಕೆಲಸ ಮಾಡಿಸಿದುದು." ಆಗ ತುರೀಯಾನಂದರು ಸಂದೇಹವನ್ನು ತಡೆಯಲಾಗದೆ ಕೇಳಿಯೇ ಬಿಟ್ಟರು. "ಮಹಾಶಯರೇ, ನಿಮಗೆ ಆ ಯುವಕನು ಚಾಕುವನ್ನು ಹಿಂದಕ್ಕೆ ತರುವುದಿಲ್ಲವೆಂದು ಹೇಗೆ ಗೊತ್ತಾಯಿತು?" ಅದಕ್ಕವರು ಹೇಳಿದರು: "ಆ ಹುಡುಗನು ಬಂದು ಚಾಕು ಕೇಳಿದಾಗ ನಾನು ಅವನನ್ನು ಗಮನಿಸಿದೆ. ಅವನು ಅಂಗಿಯ ಗುಂಡಿಯನ್ನು ಹಾಕಿರಲಿಲ್ಲ; ಅವನ ತಲೆಕೂದಲು ಕೆದರಿ ಹಾರುತ್ತಿತ್ತು. ತಕ್ಷಣ ಅವನ ಮನಸ್ಸಿನ ಅವ್ಯವಸ್ಥೆಯ ಸ್ಥಿತಿ ನನಗೆ ಮನದಟ್ಟಾಯಿತು. ಆಗಲೇ ನನಗೆ ಕೊಟ್ಟ ಸಾಮಾನು ಹಿಂತಿರುಗಿ ಬರುವುದಿಲ್ಲವೆಂದು ಖಾತರಿಯಾಯಿತು."

ಸ್ವಾಮಿ ನಿಖಿಲಾನಂದರು ಹೇಳಿದರು: **"ಈ ಘಟನೆಯಿಂದ ನಮ್ಮ ಮನಸ್ಸಿಗೆ ಯಾವ ತರಹದ ತರಬೇತಿ ಬೇಕು ಎಂಬುದು ಮನದಟ್ಟಾಯಿತು. ಯಾರು ಧ್ಯಾನಜೀವನದಲ್ಲಿ ಮುಂದುವರಿದು, ಆನಂದ ಪಡೆದಿರುವರೋ ಅಂತಹವರ ಜೀವನರೀತಿ ಬಹಳ ಶಿಸ್ತಿನಿಂದ ಕೂಡಿರುತ್ತದೆ. ಅನಾವಶ್ಯಕವಾಗಿ ಒಂದು ಪದವನ್ನು ಉಚ್ಚರಿಸುವುದೋ ಅಥವಾ ಉದ್ದೇಶರಹಿತವಾದ ನಡವಳಿಕೆಯೋ ಅವರಲ್ಲಿ ಕಾಣಬರುವುದಿಲ್ಲ. ಏಕೆಂದರೆ, ಇದರ ಫಲವಾಗಿ ಧ್ಯಾನಜೀವನಕ್ಕೆ ಭಂಗ ಉಂಟಾಗುವುದು."**

****

**ಸ್ವಾಮಿ** ನಿಖಿಲಾನಂದರು ಮುಂದುವರಿದು ಹೇಳತೊಡಗಿದರು: "ಸ್ವಾಮಿ ವಿವೇಕಾನಂದರು ಉನ್ನತ ಸ್ತರಕ್ಕೆ ಸೇರಿದವರು. ನಾವು ನಮ್ಮ ಈ ಕ್ಷುಲ್ಲಕ ಬುದ್ಧಿ ಮತ್ತು ಮನಸ್ಸಿನಿಂದ ಅವರನ್ನು ಅರಿಯಲು ಪ್ರಯತ್ನಿಸುತ್ತೇವೆ; ಅವರ ಜೀವನಚರಿತ್ರೆ ಹಾಗೂ ಉಪದೇಶಗಳನ್ನು ಜನರಿಗೆ ವಿವರಿಸುತ್ತೇವೆ. ಅವರ ಬಗ್ಗೆ ಯಥಾವತ್ತಾಗಿ ತಿಳಿಯುವುದೋ ಅಥವಾ ಹೇಳುವುದೋ ಅಸಾಧ್ಯವಾದುದು."

"ಜನರಿಗೆ ಸ್ವಾಮಿ ವಿವೇಕಾನಂದರನ್ನು ಒಮ್ಮೆ ನೋಡಿದರೂ ಸಾಕು, ಜೀವನದಾದ್ಯಂತ ಅವರನ್ನು ಮರೆಯಲು ಸಾಧ್ಯವಾಗದು. ನಾನು ಅಮೆರಿಕದಲ್ಲಿದ್ದಾಗ, ವಿಶ್ರಾಂತಿಗಾಗಿ ಸ್ವಾಮಿ ಯತೀಶ್ವರಾನಂದರು ಮತ್ತು ಸ್ವಾಮಿ ಸತ್ಪ್ರಕಾಶಾನಂದರ ಜೊತೆಯಲ್ಲಿ 'ಲೇಕ್ ಜಾರ್ಜ್' ಎಂಬ ಸ್ಥಳಕ್ಕೆ ಹೋಗಿದ್ದೆನು. ಒಂದು ದಿನ ಅಲ್ಲಿನ ಸರೋವರದ ದಂಡೆಯ ಮೇಲೆ ವಿಹಾರಕ್ಕಾಗಿ ಹೋಗಿದ್ದೆವು. ಆಗ ಒಬ್ಬ ಯುವಕ ನಾವಿಕನು ನನ್ನನ್ನೇ ವೀಕ್ಷಿಸುತ್ತಾ ಬಳಿಗೆ ಬರುತ್ತಿರುವುದನ್ನು ಕಂಡು ಅವನಿಗೆ ನನ್ನಿಂದ ಏನಾದರೂ ಬೇಕಿರಬಹುದು ಎಂದುಕೊಂಡು ನಿಂತುಕೊಂಡೆ. ಅವನು ಹತ್ತಿರ ಬಂದು ನನಗೆ ಒಂದು ಫಲಕವನ್ನು ತೋರಿಸಿದ. ಅದರಲ್ಲಿ ಅವನ ಹೆಸರು ಅಚ್ಚಾಗಿರುವುದಾಗಿ ಕಂಡಿತು. ಅವನ ಹೆಸರಿನ ಪ್ರಾರಂಭ 'ಸಾಲೋನ್' ಎಂದು. ಮುಂದಿನದು ಅಷ್ಟು ಸರಿಯಾಗಿ ನನಗೆ ನೆನಪಿಲ್ಲ. ಅವನು ಹೇಳಿದ, 'ನನ್ನ ತಂದೆಯವರು ಸಹಾ ನಾವಿಕರಾಗಿದ್ದರು. ಒಮ್ಮೆ ಅವರು ಸಿಲೋನಿಗೆ ಪ್ರವಾಸಕ್ಕಾಗಿ ಹೋಗಿದ್ದಾಗ ಅವರು ಆ ಸ್ಥಳವನ್ನು ಬಹಳವಾಗಿ ಇಷ್ಟಪಟ್ಟರು. ಅದರ ಜ್ಞಾಪಕಾರ್ಥವಾಗಿ ನನಗೆ ಈ ಹೆಸರನ್ನು ನಾಮಕರಣ ಮಾಡಿದರು. ನನಗೆ ಭಾರತದ ಬಗ್ಗೆ ಅಷ್ಟಾಗಿ ತಿಳಿಯದು. ಆದರೆ ನನ್ನ ಪತ್ನಿಗೆ ಹೆಚ್ಚಾಗಿ ಗೊತ್ತಿದೆ. ಅವಳು ಭಾರತದ ಬಗ್ಗೆ ಪುಸ್ತಕಗಳನ್ನು ಓದುತ್ತಾಳೆ. ನೀವು ಇಚ್ಛೆಸಿದಲ್ಲಿ ಅವಳನ್ನು ಭೇಟಿ ಮಾಡಬಹುದು' ಎಂದು ಹೇಳಿದ. ನಾನು 'ಖಂಡಿತವಾಗಿ' ಎಂದಾಗ ಅವನು ತನ್ನ ಪತ್ನಿಯನ್ನು ಕರೆತಂದ.

"ಅವಳು ಸ್ವಾಮಿ ವಿವೇಕಾನಂದರ ರಾಜಯೋಗ ಹಾಗೂ ಮತ್ತಿತರ ಪುಸ್ತಕಗಳನ್ನು ಅಧ್ಯಯನ ಮಾಡಿದ್ದಳು. ಸ್ವಾಮಿ ವಿವೇಕಾನಂದರ ಭಕ್ತೆಯಾಗಿದ್ದಳು. ಅವಳು ಹೇಳಿದಳು: 'ನೀವು ನನ್ನ ಅತ್ತೆಯವರನ್ನು ಭೇಟಿ ಮಾಡಲೇಬೇಕು ಏಕೆಂದರೆ ಅವರು ಸ್ವಾಮಿ ವಿವೇಕಾನಂದರನ್ನು ನೋಡಿದ್ದಾರೆ.' ಆಕೆಯನ್ನು ಕರೆಸಿದರು. ಅವರಿಗೆ ಈಗಾಗಲೇ ೮೦ ವರ್ಷ ವಯಸ್ಸು. ನೋಡಲು ಸಣ್ಣ ಆಕೃತಿಯ ಹೆಂಗಸು. ಆದರೆ ಅವರ ಕಣ್ಣುಗಳು ಪ್ರಕಾಶಮಾನವಾಗಿ, ಕೆಂಡಗಳಂತೆ ಪ್ರಜ್ವಲಿಸುತ್ತಿದ್ದವು. ಆಕೆಗೆ ತನ್ನ ಬಗ್ಗೆ ಒಂದು ರೀತಿಯ ಹೆಮ್ಮೆಯ ಭಾವನೆ ಇದ್ದಿತು. ಅವರು ಹೇಳತೊಡಗಿದರು: "ಹೌದು, ನಾನು ಚಿಕಾಗೋ ಸರ್ವಧರ್ಮ ಸಮ್ಮೇಳನಕ್ಕೆ ನನ್ನ ತಾಯಿಯ ಜೊತೆಗೆ ಹೋಗಿದ್ದೆ. ನನಗೆ ಆಗ ೧೬ ವರ್ಷದ ಪ್ರಾಯ ಮಾತ್ರ. ಆದರೂ ಸ್ವಾಮಿ ವಿವೇಕಾನಂದರು ಭಾಷಣ ಮಾಡಿದ ಆ ದೃಶ್ಯ ಈಗಲೂ ಕಣ್ಣ ಮುಂದೆ ಬರುತ್ತಿದೆ. ಸ್ವಾಮೀಜಿಯವರು ವೇದಿಕೆ ಮೇಲೆ ಅತ್ತ ಇತ್ತ ಗಂಭೀರವಾಗಿ ನಡೆಯುತ್ತಾ ಮಾತನಾಡುತ್ತಿದ್ದರು. ಒಂದೊಂದು ಸಲ ವೇದಿಕೆಯ ಅಂಚಿಗೆ ಬರುವಾಗ ಒಮ್ಮೆ ನಿಂತು ನನ್ನ ಕಡೆ ವೀಕ್ಷಿಸುತ್ತಿದ್ದರು. ನಾನು ಮುಂದಿನ ಸಾಲಿನಲ್ಲೇ ಕುಳಿತಿದ್ದೆ. ಅವರು ಒಂದು ವಿಷಯವನ್ನು ತೆಗೆದುಕೊಂಡು, ಅದನ್ನು ವಿವರಿಸಿ ಹೇಳಿ, ಕೊನೆಯಲ್ಲಿ ನನ್ನ ಮುಖ ನೋಡುತ್ತಿದ್ದರು. ಆಶ್ಚರ್ಯದ ಸಂಗತಿ ಎಂದರೆ ನನ್ನಲ್ಲಿದ್ದ ಕೆಲವು ಧಾರ್ಮಿಕ ವಿಶ್ವಾಸಗಳು ಭವಿಷ್ಯದಲ್ಲಿ ತಲೆಕೆಳಕಾಗತೊಡಗಿದವು. ಆಗ ನನಗೆ ಅವರ 'ರಾಜಯೋಗ' ಎನ್ನುವ ಗ್ರಂಥ ದೊರಕಿತು. ಅದನ್ನು ಓದಿದಾಗ, ನನ್ನ ಸಂಶಯಗಳೆಲ್ಲಾ ನಾಶವಾದವು; ಮನಸ್ಸಿನ ಉದ್ವೇಗಗಳು ಒಂದು ಹಿಡಿತಕ್ಕೆ ಬಂದು ಶಾಂತಿ ಲಭಿಸಿತು."

"ನಾನೂ ಸಹ ವಿವೇಕಾನಂದರು ಸ್ಥಾಪಿಸಿದ ಸಂಘಕ್ಕೆ ಸೇರಿದವರೆಂದು ಅವರಿಗೆ ತಿಳಿಸಿದೆ. 'ನ್ಯೂಯಾರ್ಕಿನಲ್ಲಿ ಇದರ ಶಾಖಾ ಕೇಂದ್ರವಿದೆ. ನೀವು ಬ್ರೂಕ್ಲಿನ್‌ನಲ್ಲಿ ಇರುವುದರಿಂದ ನಮ್ಮ ಕೇಂದ್ರಕ್ಕೆ ಬಂದು ಅಲ್ಲಿನ ಸಮಾರಂಭಗಳಲ್ಲಿ ಪಾಲ್ಗೊಳ್ಳಬಹುದು' ಎಂದು ಹೇಳಿ ನಮ್ಮ ವಿಳಾಸವನ್ನು ಕೊಟ್ಟೆ. ಆಗ ಆ ವೃದ್ಧೆ ನನ್ನನ್ನು ಉರಿಯುವ ಕಣ್ಣುಗಳಿಂದ ದುರದುರನೆ ನೋಡಿ, ಗಡುಸಾಗಿ ನುಡಿದರು:

**'ಏನು ನೀವು ಹೇಳುವುದು? ಏನೆಂದು ತಿಳಿದಿರುವಿರಿ? ನಿಮಗೆ ಏನು ತಾನೆ ಗೊತ್ತಿದೆ? ಜೀವನದಲ್ಲಿ ಒಮ್ಮೆ ಸ್ವಾಮಿ ವಿವೇಕಾನಂದರನ್ನು ದರ್ಶಿಸಿ ಅವರ ವಾಣಿಯನ್ನು ಆಲಿಸಿದವರಿಗೆ ಬೇರೆ ಯಾವ ಕಡೆಯೂ ಹೋಗುವ ಆವಶ್ಯಕತೆ ಇಲ್ಲ; ಬೇರೆ ಯಾರ ಭಾಷಣವನ್ನು ಕೇಳುವ ಆವಶ್ಯಕತೆಯಂತೂ ಖಂಡಿತ ಇರುವುದಿಲ್ಲ.' "**

✪